ಎಲೆಗಳ ನಡುವೆ ಹಸಿರೆಲೆಯ, ಮಣ್ಣು ಬಣ್ಣದ ಹಾವುಗಳಿರಬಹುದು. ಹೋಗುವ ಕಾಡು, ಅದರ ದಾರಿ ಹಾಗೂ ಜಲಪಾತದ ಗುಣ ಎಂಥದ್ದು ಎಂಬುದನ್ನು ಮೊದಲು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿ. ಆಮೇಲೆ ಯೋಜನಾಬದ್ಧವಾಗಿರಿ.

## ಹವಾಮಾನ ತಿಳಿದಿರಲಿ

ಆಗಷ್ಟೆ ಮಳೆಯ ನೀರಿಗೆ ತೋಯ್ದು ನಿಂತ ಅಥವಾ ಸಣ್ಣಗೆ ಜಿನುಗುವ ಮಳೆಯಲ್ಲಿ ಜಲಪಾತವನ್ನು ಕಣ್ತುಂಬಿಕೊಳ್ಳುವ ಖುಷಿಯೇ ಬೇರೆ. ಹಾಗೆಂದು ಮುಸಲಧಾರೆಯಲ್ಲಿ ಜಲಪಾತ ನೋಡಲು ಹೋಗದಿರುವುದೇ ಉತ್ತಮ. ಅತಿಯಾದ ಮಳೆಗೆ ಜಲಪಾತದ ಸಮೀಪ ಇರುವ ಸೇತುವೆಗಳು ಕುಸಿಯಬಹುದು. ಜಲಪಾತದ ಭೋರ್ಗರೆತ ಹೆಚ್ಚಿರಬಹುದು. ಗುಡುಗು, ಸಿಡಿಲು ಇದ್ದಾಗ ಬಯಲಿನಲ್ಲಿ, ಮರಗಳ ನಡುವೆ ಚಾರಣ ಮಾಡುವುದನ್ನು ಆದಷ್ಟು ತಪ್ಪಿಸಿ. ಹವಾಮಾನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಮುನ್ನಡೆಯಿರಿ. ಏರು ಪ್ರದೇಶವಾಗಿದ್ದು, ಹಾದಿ ಕಿರಿದಾಗಿದ್ದರೆ, ಮೆಟ್ಟಿಲುಗಳು ಜಾರುವಂತಿರುತ್ತದೆ. ನೋಡಿಕೊಂಡು ಹೆಜ್ಜೆ ಇಡಿ.

ಅಲ್ಲಲ್ಲಿ ಹಾಕಿರುವ ಚಾರಣ ಕಂಬಗಳನ್ನು ಬಳಸಿ. ಹಾದಿಯು ಕಡಿದಾದ ಅಥವಾ ಕಲ್ಲಿನಿಂದ ಕೂಡಿದ್ದರೆ ಚಾರಣಗಂಬಗಳು ಚಾರಣಿಗರಿಗೆ ಹೆಚ್ಚಿನ ಸುರಕ್ಷತೆ ಒದಗಿಸಬಹುದು. ಅಪಾಯ ಎದುರಾದರೆ ಹತ್ತಿರ ಎಲ್ಲಿ ಆಶ್ರಯ ಪಡೆಯಬಹುದು ಎಂಬುದರ ಬಗ್ಗೆಯೂ ಮೊದಲೇ ಒಂದು ಸಣ್ಣ ನೋಟ್ ಮಾಡಿಕೊಳ್ಳುವುದು ಉತ್ತಮ.

## ಈಜುವ ಮುನ್ನ ಯೋಚಿಸಿ

ನೀರು ನೋಡಿದಾಕ್ಷಣ ಈಜುಪಟುಗಳಿಗೆ ಈಜಬೇಕೆಂಬ ಆಸೆಯಾಗುವುದೆಲ್ಲ ಸಹಜ. ಭೋರ್ಗರೆಯುವ ಜಲಪಾತದ ಕೆಳಗೆ ತಣ್ಣಗೆ ಹರಿಯುವ ನೀರಿನಲ್ಲಿ ಈಜುವ ಮುನ್ನ ಯೋಚಿಸಿ. ನೀರಿನ ಶಕ್ತಿ ಅಗಾಧವಾಗಿರುತ್ತದೆ. ಭೋರ್ಗರೆತ ಹೆಚ್ಚಾದಂತೆ ಅದು ಬೀಳುವ ತಳವು ಗುಂಡಿಗಳಂತಿರಬಹುದು. ಅಥವಾ ಆ ಜಾಗದಲ್ಲಿ ಚೂಪು ಕಲ್ಲುಗಳಿರಬಹುದು. ಮೊಸಳೆ, ವಿಷಕಾರಿ ಹಾವುಗಳಿರಬಹುದು. ಹರಿಯುತ್ತಿರುವ ನದಿಯಾಗಿದ್ದರೆ ಸುಳಿಯು ಇರಬಹುದು. ಹಾಗಾಗಿ ಸುರಕ್ಷಿತ ಸ್ಥಳಗಳಲ್ಲಿ ಮಾತ್ರ ಈಜಲು ಹೊರಡಿ.

## ಬಂಡೆಗಳ ಮೇಲೆ ಹತ್ತಬೇಡಿ

ಜಲಪಾತದ ಸುತ್ತಮುತ್ತ ಚಿಕ್ಕ ಚಿಕ್ಕ ಬಂಡೆಗಳಿರುತ್ತವೆ. ನೀರು ಅವುಗಳ ಮೇಲೆ ಬಿದ್ದು ಬಿದ್ದು ಅವುಗಳ ಮೇಲ್ಮೈ ಜಾರುತ್ತದೆ. ಇಂಥ ಬಂಡೆಗಳನ್ನು ಹತ್ತಲು ಹೋಗಬೇಡಿ. ಬಂಡೆಯಿಂದ ಬಂಡೆಗೆ ಹಾರುವ, ಏರುವ ಸಾಹಸ ಮಾಡಬೇಡಿ. ದೂರದಿಂದ ಒರಟು ಬಂಡೆಯಂತೆ ಕಂಡರೂ ಮಧ್ಯೆ ಮಧ್ಯೆ ಜಾರು ಮೈ ಹೊಂದಿರಬಹುದು. ಇಂಥ ಕಡೆಗಳಲ್ಲಿ ನಡೆಯುವಾಗ ಮೈಯೆಲ್ಲ ಕಣ್ಣಾಗಿರುವುದು ಉತ್ತಮ.

## ಎಚ್ಚರಿಕೆ ಫಲಕವನ್ನು ಗಮನಿಸಿ

ಜಲಪಾತ ಸಮೀಪವೇ ಇದು ಎಂಥ ಜಲಪಾತ? ಯಾವ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು? ಎಂಬ ಸಣ್ಣ



